ಪಾತ್ರ ಏನಿಲ್ಲ. ಆಮೇಲೆ ಕೌಂಟೆಸ್? ಅವಳು ರಷ್ಯಾದಿಂದ ಬರುವಾಗ ಆಭರಣಗಳನ್ನು ತಂದಿದ್ದಳು. ಅದರಿಂದ ಅವಳು ಹರಳುಗಳನ್ನು ಮಾತ್ರ ತೆಗೆಯಬೇಕಿತ್ತು. ಅದೇ ಸಂದೇಹಕ್ಕೆ ಕಾರಣವಾಯಿತು. ಆಗ ಅವಳಿಗೆ ಅನುಕೂಲವಾದದ್ದೇನೆಂದರೆ ಸಂದೇಹ ಬರದ ರೀತಿಯಲ್ಲಿ ಹಜಾರದಲ್ಲಿದ್ದ ಪಾರ್ಕರ್‌ನ ಕೈಗವಸನ್ನು ಎತ್ತಿಕೊಂಡು ತಂದು ತಿಜೋರಿಯಲ್ಲಿ ಹಾಕಿದ್ದು! ಆದರೆ ಆಗ ಅವಳಿಗೆ ತನ್ನ ಸಿಗರೇಟ್ ಪೆಟ್ಟಿಗೆಯನ್ನು ಹಾಕುವ ಉದ್ದೇಶವಿರಲಿಲ್ಲ."

"ಆದರೆ ಆ ಪೆಟ್ಟಿಗೆ ಅವಳದ್ದಾದರೆ ಅದರಲ್ಲಿ ಯಾಕೆ 'B' ಮತ್ತು 'P' ಅಕ್ಷರಗಳಿವೆ? ಕೌಂಟೆಸ್‌ಳ ಅಕ್ಷರಗಳಾದರೆ 'V' ಮತ್ತು 'R' ಆಗಿರಬೇಕಿತ್ತಲ್ಲವೇ?"

ಪೈರೆಟ್ ನನ್ನತ್ತ ಮುಗುಳ್ನಕ್ಕ.

"ಸರಿಯಾಗಿ ಹೇಳಿದೆ ಗೆಳೆಯ. ಆದರೆ ರಷ್ಯನ್ನರ ಅಕ್ಷರಮಾಲೆಯಲ್ಲಿ 'B' ಅನ್ನೋದು 'V' ಮತ್ತು 'P' ಅನ್ನೋದು 'R'."

"ಹೌದೇ? ನಾನು ಆ ರೀತಿ ಆಲೋಚಿಸಲೇ ಇಲ್ಲ. ನನಗೆ ರಷ್ಯನ್ ಭಾಷೆ ಬರುವುದಿಲ್ಲ."

"ಹೇಸ್ಟಿಂಗ್, ನನಗೂ ಬರುವುದಿಲ್ಲ. ಅದಕ್ಕೆ ನಾನು ರಷ್ಯನ್ ವ್ಯಾಕರಣ ಪುಸ್ತಕ ತರಿಸಿದ್ದು. ಅದನ್ನು ನಿನ್ನ ಗಮನಕ್ಕೆ ತಂದಿದ್ದೆ" ಪೈರೆಟ್ ನಿಟ್ಟುಸಿರು ಬಿಟ್ಟು ಹೇಳಿದ: "ಅವಳು ಕುತೂಹಲಕರ ಹೆಂಗಸು. ನಾನು ಭಾವುಕನಾಗಿದ್ದೇನೆ. ಅವಳನ್ನು ಮತ್ತೆ ನಾನು ಭೇಟಿಯಾಗಬೇಕು. ಎಲ್ಲಿ? ನಾನು ಆತುರನಾಗಿದ್ದೇನೆ."

## ಅಗಾಥ ಕ್ರಿಸ್ಟಿ (1890 – 1976)

ಪತ್ತೆದಾರಿ ಸಾಹಿತ್ಯದಲ್ಲಿ ಇಂಗ್ಲೆಂಡಿನ ಅಗಾಥ ಕ್ರಿಸ್ಟಿಯವರದು ಚಿರಪರಿಚಿತ ಹೆಸರು. ಕುತೂಹಲಭರಿತ ಕತೆ, ಕಾದಂಬರಿ ಮತ್ತು ನಾಟಕಗಳ ಮೂಲಕ ಪ್ರಸಿದ್ಧರಾದ ಇವರ ಸಾಹಿತ್ಯ ಪ್ರವೇಶವೇ ಕುತೂಹಲಕರವಾಗಿದೆ. ಸಹೋದರಿಯ ಸವಾಲನ್ನು ಸ್ವೀಕರಿಸಿ ಪತ್ತೆದಾರಿ ಬರವಣಿಗೆಯನ್ನು ಆರಂಭಿಸಿದ ಅಗಾಥ ಕ್ರಿಸ್ಟಿ ತಮ್ಮ ವೈಯಕ್ತಿಕ ಜೀವನದಲ್ಲಿಯೂ ಹತ್ತು ದಿವಸಗಳ ಕಾಲ ನಾಪತ್ತೆಯಾಗಿ ಕುತೂಹಲ ಸೃಷ್ಟಿಸಿದ್ದರು. ವೈವಿಧ್ಯಮಯ ಕಥಾಹಂದರ ಇರುವ 66 ಪತ್ತೆದಾರಿ ಕಾದಂಬರಿಗಳನ್ನು ಹಾಗೂ 14 ಸಣ್ಣ ಕಥಾಸಂಕಲನಗಳನ್ನು ಬರೆದಿದ್ದಾರೆ. ಇವರು ಪತ್ತೆದಾರಿ ಸಾಹಿತ್ಯಕ್ಕೆ ಸೀಮಿತವಾಗದೆ 'ಮೇರಿ ವೆಸ್ಟ್ ಮೆಕ್ಕೊಟ್' ಎಂಬ ಕಾವ್ಯನಾಮದಿಂದ ಪ್ರಣಯ ಕಾದಂಬರಿಗಳನ್ನು ಕೂಡ ಬರೆದಿದ್ದಾರೆ.

## ಅನು ಬೆಳ್ಳೆ

ಅನು ಬೆಳ್ಳೆ ಕಾವ್ಯನಾಮದಲ್ಲಿ ಬರೆಯುವ ರಾಘವೇಂದ್ರ ಬಿ. ರಾವ್ ಪತ್ತೆದಾರಿ ಕತೆಗಳ ಮೂಲಕ ಸಾಹಿತ್ಯಕ್ಕೆ ಪ್ರವೇಶ ಪಡೆದವರು. ವೃತ್ತಿಯಲ್ಲಿ ವಾಣಿಜ್ಯಶಾಸ್ತ್ರ ಉಪನ್ಯಾಸಕ. ಈವರೆಗಿನ ಪ್ರಕಟಿತ ಕೃತಿಗಳು ಸುಮಾರು 50. ಪ್ರಸ್ತುತ ಮೂಡುಬಿದಿರೆಯಲ್ಲಿ ನೆಲೆಸಿದ್ದಾರೆ.